## ಯಲ್ಲಾ ದಹಳ್ಳಿ (ಪಾರ್ಶ್ವಪುರ) ಶಾಸಾನ

೧. ಮಂಡ್ಯ  ಜಿಲ್ಲೆಯ ನಾಗಮಂಗಲ ತಾಲ್ಲೂಕಿನ ಈಗಿನ ಯಲ್ಲಾದ ಹಳ್ಳಿಗೆ ಹಿಂದೆ ಇದ್ದ ಹೆಸರು ಪಾಶ್ವ (ನಾಥ) ಪುರ ಎಂದು. ಇಲ್ಲೊಂದು ಪಾರ್ಶ್ವನಾಥ ಬಸದಿಯಿತ್ತು , ಅದು ಈಗ ಹಾಳು ಬಿದ್ದು  ಹೋಗಿದೆ. ಈ ಹಳ್ಳಿಗೆ, ಇಲ್ಲಿನ ಬಸದಿಗೆ ಸಂಬಂಧುಸಿದ ಇಕೆಲವು ಮಾಹಿತಿಗಳು ಅಲ್ಲಿನ ಶಾಸನದಲ್ಲಿವೆ: ಎ.ಕ. ೭(ಪ) ನಾಮಂ ೬೪ ೯೪ನಾಮಂ ೭೬) ೧೧೪೫–೪೯.

೨. ಹೊಯ್ಸಳ  ಒಂದನೆಯ ನರಸಿಂಹನ ಆಳ್ವಿಕೆಯಲ್ಲಿ ನಡೆದ ಘಟನೆ ಹೀಗಿದೆ : ಸೂರನ ಹಳ್ಳಿಯ ಪಾರ್ಶ್ವಜಿನಭನವನ್ನು ಕಟ್ಟಿಸಲಾಯಿತು. : ಅದಕ್ಕೆ ಸಮ್ಯಕ್ತ ರತಾಕರ ಮಹಾಪ್ರ ಧಾನ ದೇವರಾಜ ಹಲವು ದಾನ ದತ್ತಿಗಳನ್ನು ನೀಡಿದನು [ಅದೇ, ಸಾಲು: ೬೯–೭೨].

೩.  ಈ ಶಾಸನದಲ್ಲಿ ೭೫ ದೊಡ್ಡ ಸಾಲುಗಳಿವೆ ಶಾಸನದ ಅರ್ಧಭಾಗ ಪೂರ್ತಿ ಹೊಯ್ಸಳ ನರಸಿಂಹ , ರಾಜನ ವರ್ಣನೆಗೆ ಮೀಸಲಾಗಿದೆ. ಇನ್ನರ್ಧ (ದ್ವಿತೀಯಾರ್ಥ )ಭಾಗದಲ್ಲಿ ಈಶಾಸನದ ಕೇಂದ್ರ ವ್ಯಕ್ತಿಯಾದ ದೇವರಾಜ ವರ್ಣನೆ ಬಂದಿದೆ. ಅದರಲ್ಲಿ ,ಈ ಶಾಸನದಲ್ಲಿರುವ ಕೇಂದ್ರ  ಕ್ರಿಯೆಯಾದ, ಪಾಶ್ವ ೯ಜಿನರಿಗೆ ನಿಮೀಸಿದ ಉತ್ತುಂಗಕೂಟವೆನಿಸಿದ ತ್ರಿಕೂಟ ಜಿನಗೇಹದ ವಿಚಾರವೂ ಫ್ರತಿಪಾದಿತವಾಗಿದೆ.

೪. ದೇವರಾಜನು ಅಮರೇಂದ್ರ ಭವನ ಮೆನಿಪ –ಪಾರ್ಶ್ವನಾರ್ಥರ ಜಿನಭವನನ್ನು ರಾಜ ರಾಷ – ಯಶೋಧನವೃಧ್ಯ ರ್ತ್ಥವಾಗಿ ಮಾಡಸಿದನು.೯ ಹೊಯ್ಸಳೇಶ್ವರ ನರಸಿಂಹನುತ್ನ್ನ ಈ ಫ್ರ ಧಾನಿ ದೇವರಾಜ ಸೂರನ ಹಳ್ಳಿಯ ನ್ನು ಬಿಟ್ಟು ಕೊಟ್ಟನು.

೪.೧. ದೇವರಾಜನು ಸೂರನಹಳ್ಳಿಗೆ ಫಾರ್ಶ್ವಪುರವೆಂದು ಹೆಸರಿಟ್ಟನು.

೪.೧.೧. ದೇವರಾಜನು ಕೌಶಿಕ ಕುಳಾಂಬರ ದಿವಾಕರನಾಗಿದ್ದನು [ಸಾಲು: ೩೭] .

ಕೌಶಿಕಮುನೀಶ್ವರನ ತವಾರುಯ ಅನೇಕ ಅನುಪಮರು ಆಕುಲದಲ್ಲಿ ಆಹಿ ಹೋದರು, ಆಮೇಲೆ ಈ ದೇವರಾಜ ಕೌಶಿಕಕುಲದಲ್ಲಿ ಬೆಳಗಿದನು: ಭವ್ಯಚೂಡಾಮಣಿ ಯಾದ ಈತನ ಮನೋರಮೆ ಕಾಮಲದೇವಿ.

೫. ದೇವರಾಜನು ಕೌಶಿಕಕುಳ್ದವನೆಂಬ ಹೇಳಿಕೆ ಗಮನಾರ್ಹನಾಗಿದೆ. ಕೌಶಿಕ ಕುಲನೆಂಬುದು ಸಾಮಾನ್ಯವಾಗಿ ವೃದಿಕ ಮೂಲಕ್ಕೆ ಅನ್ವಯವಾಗುವ ವಂಶ–ಗೋತ್ರ ಹೀಗಿರುವಾಗ ಅಪ್ಪಟಜೈನನಾದ ದೇವರಾಜನಿಗೆ ಕೌಶಿಕವಂಶದ ಸಂಬಂಧ ಹೇಗೆ ಕಲಿತವಾಯಿತೆಂಬ ಘ್ರಶ್ನೆ ಉದ್ಭವಿಸುತ್ತದೆ.

೬. ಕೆಲವು ಗೋತ್ರ–ವಂಶಹಳು ಜೈನ– ವೃದಿಕ ಮತಧರ್ಮಗಳಲ್ಲಿ ಸಮಾನವಾದ ಹೆಸರುಗಳನ್ನು ಪಡೆದಿವೆ.

೬. ೧ ಮಹಾವೀರ ಜಿನನ ತಾಯಿ ತ್ರ್ರಿಶಲಾ ಘ್ರಿಯಕಾರಿಣಿಯ ವಾಸಿಷಗೋತ್ರ ದವಳು: ಮಹಾವೀರನ ತಂದೆ ಸಿದ್ದಾರ್ಥನು ಕಾಶ್ಯಪ ಗೋತ್ರಿಯನು. ಘ್ರಯಾಗ ಮತ್ತುಅ ಕೌಶಾಂಬಿ ಸಮೀಪದ ಪಭೋಸಾ ಎಂಬಲ್ಲಿನ ಎರಡು ಗುಹೆಗಳಲ್ಲಿ ಕ್ರಿ .ಪೂ. ಎರಡನೆಯ ಶತಮಾನದ ಲಿಪಿಯ ಲೇಖವಿದೆ: ಈ ಶಾಸನದಲ್ಲಿ ‘ಅಹಿಚ್ಛತ್ರದ ಆಷಾಢ ಸೇನನು ಕಾಶ್ಯಪೀಯ ಅರ್ಹಂತನಿಗಾಗಿ ಈಗುಹೆಗಳನ್ನು ದಾನಮಾಡದನು–ಎಂದಿದೆ. ‘ವರ್ಧಮಾನ ಮಹಾವೀರನು ಕಾಶ್ಯಪಗೋ ತ್ರದವ ನಾಗಿದ್ದನು. ಮಹಾವೀರನ ಶಿಷ್ಯ ಪರಂಪರೆಯ ಮುನಿಗಳು ಕಾಶ್ಯಪೀಯ ಅರ್ಹಂತರು” [ಹೀರಾಲಾಲ್ಜೈನ, ಭಾರತೀಯ ಸಂಸ್ಕೃತಿಗೆ ಜೈನ ಧರ್ಮದ ಕೊಡುಗೆ, ಕನ್ನಡ ಅನುಮಾವಾದ– ಮಿರ್ಜಿ ಅಣ್ಣಾರಾಯ:೧೯೭೧, ೩೮೨]

೬.೧. ಮಂಡ್ಯ ಜಿಲ್ಲೆ ನಾಗಮಂಗಲ ತಾಲ್ಲೂಕು ಅಳೀಸಂದ್ರದ ಜೈನ ಶಾಸನದಲ್ಲಿ ಕೌಂಡಿಲ್ಯಗೋತ್ರ್ರವನ್ನು ಹೇಳಿದೆ [ಎ.ಕ . ೭.೯ಪಂ ನಾಮಂ ೭೨, ೧೧೪೩ ]- ಇಂತು ಪೊಗಳೆಗೆ ನೆಲೆಯಾದ ಕೌಂಡಿಲ್ಯ ಗೋತ್ರ ದ ಡಾಕರಸದಂಡನಾಯಕ.

೭. ಆದ್ದರಿಂದ ಜೈನನಾದ 'ದೇವರಾಜನು ಕೌಶಿಕ ವಂಶವೆಂಬ ಆಕಾಶವನ್ನು ಭೆಳಗುವವನಾಗಿದ್ದನು' ಎಂಬ ಮಾತಿಗೆ ಜೈನ ಆಹಮ-ಪುರಾಣಗಳ ಹಿನ್ನಲೆಯೂ ಇದೆ.